## ಇದೆಂತಹ ಚರ್ಚೆ?

ಪ್ರತಿಯೊಂದು ಟಿವಿ ಚಾನಲ್‌ಗಳಲ್ಲಿ ಒಂದಲ್ಲ ಒಂದು ವಿಷಯಕ್ಕೆ ಸಂಭಂದಿಸಿದಂತೆ ಪ್ಯಾನಲ್ ಚರ್ಚೆಗಳು ನಡೆಯುತ್ತಿರುತ್ತವೆ. ಆದರೆ ಚರ್ಚೆಯ ನಿರ್ವಾಹಕರಿಗಾಗಲಿ, ಚರ್ಚೆಯಲ್ಲಿ ಭಾಗವಹಿಸುವವರಿಗಾಗಲೀ ಚರ್ಚೆಯ ರೂಪುರೇಷೆಯ ಕನಿಷ್ಠ ಜ್ಞಾನವೂ ಇದ್ದಂತಿಲ್ಲ. ಭಾಗವಹಿಸಿದವರೆಲ್ಲರೂ ಒಟ್ಟೊಟ್ಟಿಗೆ ಕಿರುಚುತ್ತಾ ಯಾರ ಮಾತು ಯಾರಿಗೂ ಕೇಳಿಸುವುದಿಲ್ಲ. ಚರ್ಚೆಯ ನಿರ್ವಾಹಕರು ಅಸಹಾಯಕರಾಗಿ ಕುಳಿತಿದ್ದರೆ, ಟಿವಿ ವೀಕ್ಷಿಸಲು ಕುಳಿತವರಿಗೆ ಹುಚ್ಚು ಹಿಡಿಯುವುದೊಂದು ಬಾಕಿ. ಮೀನಿನ ಮಾರುಕಟ್ಟೆಯನ್ನು ನೆನಪಿಸುವ ಇಂತಹ ಚರ್ಚೆಗಳಿಗೆ ಕಡಿವಾಣ ಹಾಕಿ, ಆರೋಗ್ಯ ಪೂರ್ಣವಾದ ಚರ್ಚೆಗಳನ್ನು ಪ್ರಸಾರ ಮಾಡಲಿ.

-ಶಿವಮೊಗ್ಗ ರಮೇಶ್, ಮೈಸೂರು.

## ಹೀಗೆ ಬಂದು ಹಾಗೆ ಹೋದರು

ಕಮಲಿ (ಝೀ ಕನ್ನಡ) ಧಾರಾವಾಹಿಯಲ್ಲಿ ಹಿರಿಯ ಹಾಸ್ಯ ಕಲಾವಿದ, ನಿರ್ದೇಶಕ ಬೆಂಗಳೂರು ನಾಗೇಶ್ ಹೀಗೆ ಬಂದು, ಹಾಗೆ ಹೋದರು. ಇರುವಷ್ಟು ಅವಧಿಯಲ್ಲಿ ತಮ್ಮ ಅಭಿನಯದ ಛಾಪನ್ನು ಮೂಡಿಸಿದ್ದಾರೆ. ಭವ್ಯಶ್ರೀ ಎಂದಿನಂತೆ ಖಳನಾಯಕಿಯಾಗಿದ್ದಾರೆ. ಪುಟ್ಟಣ್ಣನ ಮಗಳು ಪದ್ಮಾವಾಸಂತಿಯೂ ನಟಿಸಿದ್ದಾರೆ. ಕಮಲಿ ತಾಯಿಯ ಅಭಿನಯ ಚೆನ್ನಾಗಿದೆ. ಕಮಲಿ ಕ್ರೀಡಾಪಟು ಆಗಿದ್ದರೂ ಎರಡು ಜಡೆ, ಟೇಪು, ಲಂಗ ದಾವಣಿ ಹಾಕುತ್ತಾಳೆ. ಮನೆ ದೇವ್ರುನಲ್ಲೂ ಕಾಶಿಯವರು ಹೀಗೆ ಬಂದು ಹಾಗೆ ಹೋಗಿದ್ದರು. ಅಲ್ಲಿ ಒಂದೆರಡು ಸಂಚಿಕೆಯಲ್ಲೇ ಕಾಶಿ ಸತ್ತರೆ ಇಲ್ಲಿ ಬೆಂಗಳೂರು ನಾಗೇಶ್ ಸಾಯುತ್ತಾರೆ.

-ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ

ವಾರದ ಪತ್ರ

## ಭಾವನೆಗಳನ್ನು ಬಲಿ ಕೊಡಬೇಡಿ..

ಕಲರ್ಸ್ ಕನ್ನಡದಲ್ಲಿ ಸಂಜೆ 7.30ಕ್ಕೆ ಪ್ರಸಾರವಾಗುವ ಲಕ್ಷ್ಮೀ ಬಾರಮ್ಮ ಧಾರಾವಾಹಿಯ ಕಥೆ ಅರ್ಥವಿಲ್ಲದೆ ಮುಂದುವರಿಯುತ್ತಿದೆ. ಧಾರಾವಾಹಿಯ ಗೊಂಬೆಯ ಪಾತ್ರ ನೋಡಿದರೆ ಅಯ್ಯೋ ಅನಿಸುತ್ತದೆ. ಮೊದಲು ಮಗುವನ್ನು ಕಳೆದುಕೊಂಡು ನಂತರ ಮಗುವಿಕ್ಕಾಗಿ ಇವಳೇ ಕಿಡ್ನ್ಯಾಪ್ ಆಗಿ ಮಾತ್ರೆಯ ಪ್ರಭಾವದಿಂದಾಗಿ ಎಲ್ಲವನ್ನು ಮರೆತ ಅವಳ ಪಾತ್ರ ನೋಡಿದಾಗ; ಸೂಕ್ಷ್ಮ ಮನಸ್ಸಿನ ಭಾವನೆಗಳನ್ನು ಬಲಿ ಕೊಡುತ್ತಾ ಅದನ್ನು ವರ್ಣರಂಜಿತವಾಗಿ ಪದೇ ಪದೇ ತೋರಿಸುವುದು ಸರಿಯಲ್ಲ ಎಂದೆನಿಸುತ್ತದೆ. ಇತ್ತ ಗೊಂಬೆಯ ಮಗು ಅಮ್ಮನಿಗಾಗಿ ಹಂಬಲಿಸುತ್ತಿದೆ. ಅತ್ತ ಗೊಂಬೆ ನೂರೆಂಟು ಸಂಕಷ್ಟದಲ್ಲಿ ನರಳುತ್ತಾಳೆ. ಸಂಬಂಧಗಳಿಗೆ ಸಂಬಂಧಿಸಿದಂತೆ ಸೂಕ್ಷ್ಮ ಭಾವನೆಗಳನ್ನು ಬಲಿ ಕೊಡುವುದು, ಈ ರೀತಿ ಅದನ್ನು ಪ್ರದರ್ಶಿಸುವುದು ಬೇಕೇ?

-ಮಾಧವಿಲತಾ ಚಿಪ್ಪಳಕಟ್ಟೆ

## ರಘು ದಿಕ್ಷೀತ್ ನೈಟ್

ಕಲರ್ಸ್ ಕನ್ನಡದಲ್ಲಿ ರಘು ದೀಕ್ಷಿತ್‌ರವರ ಮೂರು ಗಂಟೆ ಕಾರ್ಯಕ್ರಮವನ್ನು 'ರಘು ದೀಕ್ಷಿತ್ ನೈಟ್' ಎಂಬ ಶೀರ್ಷಿಕೆಯಡಿಯಲ್ಲಿ ಮರು ಪ್ರಸಾರ ಮಾಡಲಾಯಿತು.

ಒಂದೊಂದು ಹಾಡಿಗೂ ಭಾವಾರ್ಥವನ್ನು ತಿಳಿಸುತ್ತಾ ಪ್ರೇಕ್ಷಕರ ಮನವನ್ನು ರಂಜಿಸುತ್ತಾ, ಉದಯೋನ್ಮುಖ ಕಲಾವಿದರಿಗೂ ಅವಕಾಶ ನೀಡಿದ್ದು ನಯನ ಮನೋಹರವಾಗಿತ್ತು. ಶಿಶುನಾಳ ಶರೀಫರ ಹಾಡುಗಳಿಗೆ ಹೊಸ ರಾಗವನ್ನು ಹಾಕಿ ಹಾಡುತ್ತಾ ಕುಣಿಯುತ್ತಾ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸಿದರು. ವಿಶ್ವದಲ್ಲೇ ಖ್ಯಾತಿ ಪಡೆದ ರಘು ದೀಕ್ಷಿತರ ಕಾರ್ಯಕ್ರಮ ನೋಡುತ್ತಿದ್ದ ನಮಗೆ ಸಮಯ ಜಾರಿದ್ದೇ ಗೊತ್ತಾಗಲಿಲ್ಲ.

—ಲಲಿತಾ ಅಂಬಾಗಿಲು, ಉಪ್ಪುಂದ

## ಮಕ್ಕಳ ಕಾರ್ಯಕ್ರಮ ಚಂದ

ಝೀ ವಾಹಿನಿಯ ಸರಿಗಮಪ ಸಂಗೀತ ಸುಧೆಯನ್ನು ಹರಿಸಿ,ಮನತಣಿಸಿ ಖುಷಿ ಕೊಟ್ಟಿತು. ಮಕ್ಕಳು ತಮ್ಮ ಸ್ವಪ್ರಯತ್ನದಿಂದ ,ಮಾಡಿದ ಸಾಧನೆ ನಿಜಕ್ಕೂ ಅಭಿನಂದನೆಗೆ ಅರ್ಹವಾದುದು.

ಅದರಂತೆ 'ಲಿಟಲ್ ಚಾಮ್ಸ್ ಮಾಸ್ಟರ್ಸ್' ಡ್ಯಾನ್ಸ್ ತುಂಬಾ ಚೆನ್ನಾಗಿ ಮಾಡುತ್ತಿದ್ದಾಳೆ. ಮಕ್ಕಳ ಧೈರ್ಯ, ಆತ್ಮವಿಶ್ವಾಸಕ್ಕೆ ನಾವು ತಲೆಬಾಗಲೇಬೇಕು.

9 ಗಂಟೆಗೆ ಬರುವ 'ಕಾಮಿಡಿ ಕಿಲಾಡಿಗಳು' ಕೂಡಾ ಹಾಸ್ಯದ ಹೊನಲಿನಲ್ಲಿ ತೇಲಿಸುತ್ತದೆ. ರಾತ್ರಿ ಮಲಗುವ ಮುನ್ನ 'ನಕ್ಕು ನಗಿಸುವ' ಇಂಥ ಕಾರ್ಯಕ್ರಮಗಳು ದಿನದ ದಣಿವು, ಮನದ ಆತಂಕ ಕಡಿಮೆ ಮಾಡಿ ಚೇತೋಹಾರಿಯಾಗಿರುವಂತೆ ಮಾಡುತ್ತವೆ. ಪ್ರೇಕ್ಷಕರ ತಾಳ್ಮೆ ಪರೀಕ್ಷಿಸುವ ಧಾರಾವಾಹಿಗಳಿಗಿಂತ ಇವೆ ಚಂದ.

—ಮೇಘನಾ ಜಹಗೀರದಾರ, ಧಾರವಾಡ

## ಆದರ್ಶ ಕಥೆ

ಝೀ ಕನ್ನಡದ ಕಮಲಿಯಲ್ಲಿ ಕಮಲಿ ಅಕ್ಷರಸ್ಥೆಯಾಗಿ ಪುರುಷ ಪ್ರಧಾನ ಸಮಾಜದಲ್ಲಿ ತಾನು ಯಾರಿಗಿಂತಲೂ ಕಡಿಮೆ ಆಗಿರಬಾರದು ಸ್ವಾಭಿಮಾನದ ಬದುಕು ತನ್ನದಾಗಬೇಕು. ಎನ್ನುವ ಹಂಬಲದಿಂದ ಬದುಕುವ ವೇಳೆಯಲ್ಲಿ ಅವಳಿಗೆ ಬರುವ ತೊಂದರೆಗಳನ್ನು ಚಿತ್ರಿಸಿರುವ ರೀತಿ ನೈಜತೆಯಿಂದ ಕೂಡಿದೆ. ಎಲ್ಲ ಪಾತ್ರಗಳ ಅಭಿನಯ ಇಷ್ಟವಾಗುತ್ತದೆ. ಅದರಲ್ಲೂ ಕಮಲಿಯ ಪಾತ್ರ ಸಹಜತೆ ಹಾಗೂ ಪರಿಪೂರ್ಣತೆಯನ್ನು ಕಂಡಿದೆ. ಅಕ್ಷರ ಮಹತ್ವ ಹೇಳುವ ಇಂತಹ ಧಾರಾವಾಹಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮೂಡಿಬರಲಿ.

-ಕುಬೇರಪ್ಪ ಎಂ. ವಿಭೂತಿ, ಹರಿಹರ

## ಇದೇನು ನೈಜವೋ ಕಾಲ್ಪನಿಕವೋ

ಕಲರ್ಸ್‌ನ 'ಶನಿ' ಕಾಲ್ಪನಿಕವಾದರೂ (ಅವರೇ ಹೇಳುವಂತೆ) ಬೇರೆ ಧಾರಾವಾಹಿಗಳಿಗಿಂತ ಭಿನ್ನವಾಗಿದೆ.

ಕೊಲೆ, ಸುಲಿಗೆ, ದರೋಡೆ ಮುಂತಾದ ಮಸಾಲೆಗಳನ್ನೊಳಗೊಂಡಿರುವ ಧಾರಾವಾಹಿಗಳ ನಡುವೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಇತ್ತೀಚಿನ ಹಠಾತ್ತಾದ ಬೆಳವಣಿಗೆಯಿಂದ ದಿಗ್ಭ್ರಮೆಯಾಯಿತು. ಸೂರ್ಯನ ಪತ್ನಿ ಸನ್ಯಾದೇವಿಯು ಮಾಲಿ, ಸುಮಾಲಿ ಎಂಬ ಸುಫಾರಿ ಹಂತಕರನ್ನು ಕರೆದು 'ನನ್ನ ಹಾದಿಗೆ ಅಡ್ಡವಾಗುತ್ತಿರುವ ಶನಿಯನ್ನು ಮೃತ್ಯುವಿನ ದವಡೆಗೆ ಎಳೆದೊಯ್ಯಿರಿ ' ಎಂದು ಅವರಿಗೆ ಸುಫಾರಿ ಕೊಟ್ಟದ್ದು ಅಚ್ಚರಿಯನ್ನುಂಟು ಮಾಡಿತು. ಪುರಾಣಗಳಲ್ಲೂ ಇದು ಸಾಧ್ಯ ಎಂದು 'ಶನಿ' ಧಾರಾವಾಹಿಯಿಂದ ಅರಿತಂತಾಯಿತು. ಇದು ಕಾಲ್ಪನಿಕವೋ, ನೈಜತೆಯೋ, ಇದನ್ನು ನಿರ್ದೇಶಕರೇ ಹೇಳಬೇಕು.

—ಪುಷ್ಪ. ಎನ್.ಆರ್. ರಾವ್, ಯರಮಾಲ್, ಉಡುಪಿ

## ತಲೆ ಚಿಟ್ಟು ಹಿಡಿದ ಪುನರಾವರ್ತನೆ

ಸ್ಟಾರ್ ಸುವರ್ಣದಲ್ಲಿ ಪ್ರಸಾರವಾಗುವ ಮುದ್ದುಲಕ್ಷ್ಮಿ ಧಾರಾವಾಹಿಯಲ್ಲಿ ಮಗ ಕಪ್ಪು ಹೆಣ್ಣನ್ನು ಮದುವೆಯಾದನೆಂದು ತಾಯಿ ಸೌಂದರ್ಯ ಕೋಪಗೊಂಡಿರುತ್ತಾಳೆ. ಸೊಸೆಯನ್ನು ಹೀನಾಯವಾಗಿ ನೋಡುತ್ತಾಳೆ. ಅಪಮಾನಿಸುತ್ತಾಳೆ. ಇದನ್ನು ಬಂಧು ಬಳಗಕ್ಕೆ ಹೇಳುತ್ತಿರುತ್ತಾಳೆ. ಇದೇ ಪುನಾರಾವರ್ತನೆಯನ್ನು ನೋಡಿನೋಡಿ ತಲೆಚಿಟ್ಟು ಹಿಡಿಯುತ್ತಿದೆ.

ಸೊಸೆಯನ್ನು ಬೀದಿ ಕಸಗುಡಿಸಿ ಮರ್ಯಾದೆ ತೆಗೆದಳೆಂದು ಬೈಯ್ಯುತ್ತಾಳೆ. ಇಂತಹ ಕೆಟ್ಟ ಧಾರಾವಾಹಿಗಳ ಬದಲಿಗೆ ಸಮಾಜದಲ್ಲಿ ಒಳಿತನ್ನು ಮನೆ ಮಾಡುವ ಕಥೆಯನ್ನು ತಿಳಿಸಿ.

—ಪ್ರಭಾವತಿ ಕೆ.ಪಿ